## ಎಚ್. ನಾಗವೇಣಿ

ದಕ್ಷಿಣ ಕನ್ನಡ ಜಿಲ್ಲೆಯ ದಟ್ಟ ಸಾಮಾಜಿಕ, ಸಾಂಸ್ಕೃತಿಕ ವಿವರಗಳೊಂದಿಗೆ ಬರೆಯುವ ಎಚ್. ನಾಗವೇಣಿ ಮಂಗಳೂರಿನ ಹೊನ್ನಕಟ್ಟೆಯವರು. ಅವರ 'ಗಾಂಧಿ ಬಂದ' ಕಾದಂಬರಿ ಕನ್ನಡದ ಮಹತ್ವದ ಕಾದಂಬರಿಗಳಲ್ಲೊಂದು.

'ನಾಕನೇ ನೀರು', 'ಮೀಯುವ ಆಟ' ಎಂಬ ಕಥಾಸಂಗ್ರಹಗಳನ್ನು, 'ವಸುಂಧರೆಯ ಗ್ಯಾನ', 'ಸೂರ್ಯನಿಗೊಂದು ವೀಳ್ಯ' ಎಂಬ ಪ್ರಬಂಧ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ನಾಗವೇಣಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರಾಗಿದ್ದಾರೆ.



ಅತ್ತೀ ಹುಣಿಸೇ ಮರದಡಿ ನಿಂತು ಬೀಡಿ ಸೇದುತ್ತಿರುವುದನ್ನು ದೂರದಿಂದಲೇ ನೋಡಿ ಮುಖ ಸಿಂಡರಿಸಿದ. ಕಿರಿ ಮಗ ಕೃಷ್ಣಪ್ಪನನ್ನು ಕಂಡರೆ, ಮಾಯಿಲನಿಗೆ ಅಷ್ಟಕಷ್ಟೆ. 'ಅಜ್ಜಿಯಬೊಜ್ಜ ತಿನ್ನಲಿಕ್ಕೂ ಬಾರದವ' ಎಂದು ಅನೇಕ ಬಾರಿ ಮಗನನ್ನು ನೆಂಟರಿಷ್ಟರ ಮುಂದೆ ನೆರೆಕರೆಯವರ ಮುಂದೆ ಹೀಗಳೆದದ್ದುಂಟು. ತನ್ನ ಎಲ್ಲಾ ಮಕ್ಕಳಲ್ಲಿ ಈತನೇ ಬರೀ ಬೂಸು, ದಂಡ... ಎಂದು ಕೃಷ್ಣಪ್ಪನನ್ನು ನಾಕು ಮಂದಿ ಸೇರಿದವರ ಕೂಟದಲ್ಲಿ ಮುಖಭಂಗ ಮಾಡುವ ಅವಕಾಶವನ್ನ ಮಾಯಿಲ ಎಂದೂ ಬಿಟ್ಟು ಕೊಟ್ಟಿದ್ದಿಲ್ಲ.

ಮಾಯಿಲನ ಐದು ಮಂದಿ ಗಂಡುಮಕ್ಕಳಲ್ಲಿ ಕೃಷ್ಣಪ್ಪನೇ ಕಡಿಮೆ ಕಲಿತವ. ಸ್ವಲ್ಪ ದಡ್ಡ ಕೂಡಾ. 'ಇವ ಎಮ್ಮೆ ಹಾಲು ಕುಡಿದವ, ಮಂದ ಬುದ್ಧಿಯವ' ಎಂದು ಕೊರಗ ಮಾಸ್ತರರು ಆತನ ಎಡಕಿವಿ ಹಿಂಡಿ, ಕಣ್ಣಿಗೆ ನಶ್ಯದ ಪುಡಿ ತುರುಕುವ ಹಿಂಸೆಯಿಂದ ಪಾರಾಗಲು ಆತ ಗುಮ್ಮಕೆರೆಯ ಆಶ್ರಯವನ್ನು ಬಯಸುತ್ತಿದ್ದ ಎಂಬ ಸತ್ಯ ಮಾಯಿಲನಿಗೂ ತಿಳಿದಿತ್ತು. ಕೊರಗ ಮಾಸ್ತರರ ಕಾಟದಿಂದ ಪಾರಾಗಲು ಗುಮ್ಮಕೆರೆಯ ದಡದಲ್ಲಿ ಕುಳಿತು 'ಪಳಕ್ ಪಳಕ್' ಎಂದು ಹಾರಾಡಿ ಈಜುತ್ತಿದ್ದ ಚಂದ್ರಮಡಕ್, ತೇಡ್‌ತಿಕಟೆ, ಮೊರಂಟೆ ಮೀನುಗಳ ಜತೆ ಆಟವಾಡುತ್ತಾ ಸಮಯ ಕಳೆಯುತ್ತಿದ್ದ. ಮೀನುಗಳೊಂದಿಗೆ ಆಟವಾಡುತ್ತಿದ್ದಾಗ ಆತನಿಗೆ ಶಾಲೆಯ ನೆನಪೇಕೆ, ಮನೆಯ ನೆನಪಾಗುತ್ತಿದ್ದುದೇ ಕಷ್ಟದಲ್ಲಿ.

ಮಾಯಿಲನಿಗೆ ಕೃಷ್ಣಪ್ಪ ಹೆಚ್ಚು ಕಲಿತವನಲ್ಲ ಎಂಬ ಕಾರಣಕ್ಕೋ ಏನೋ ಆತನೆಂದರೆ ಪ್ರೀತಿಯಿಲ್ಲ, ವಿಶ್ವಾಸವಿಲ್ಲ. ಆತನ ಉಳಿದ ಎಲ್ಲಾ ಗಂಡು ಮಕ್ಕಳೂ ಮುಂಬೈನಲ್ಲಿ ಒಳ್ಳೊಳ್ಳೆಯ ಹುದ್ದೆಗಳನ್ನು ಹಿಡಿದವರು; ಮನೆ ವಾರ್ತೆಗಳನ್ನ ನೋಡಿಕೊಳ್ಳುತ್ತಿದ್ದವರೂ ಅವರೇ. ಈ ಕಾರಣದಿಂದಲೇ ಕೃಷ್ಣಪ್ಪನೂ ತನ್ನ ಬಗ್ಗೆ ಒಂದಷ್ಟು ಕೀಳರಿಮೆಯನ್ನು ಬೆಳೆಸಿಕೊಂಡಿದ್ದ. ಮನೆಮಂದಿಯನ್ನ ಗಾಢವಾಗಿ ಹಚ್ಚಿಕೊಳ್ಳದೆ ತನ್ನ ಪಾಡಿಗೆ ತಾನಿದ್ದು ಬಿಡುವ, ಮನಸ್ಸಾದರೆ ಅಪ್ಪನೊಂದಿಗೆ ಗದ್ದೆಗಿಳಿಯುತ್ತಿದ್ದ,